ಬೆಂಗಳೂರು ಬೀದರ್ ನಡುವೆ ವೋಲ್ವೋ ಬಸ್ ಸಂಚಾರವನ್ನು ಪ್ರಾರಂಭಿಸುವುದು

1074 (1551) - ಶ್ರೀ ಎಂ.ಜಿ. ಮುಳೆ (ಬಸವ ಕಲ್ಯಾಣ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಯಾವ ಯಾವ ಮಾರ್ಗದಲ್ಲಿ ವೋಲ್ವೋ ಬಸ್‌ಗಳು ಸಂಚಾರ ನಡೆಸುತ್ತಿವೆ;

ಆ) ಇನ್ನೂ ಎಷ್ಟು ವೊಲ್ವೋ ಬಸ್‌ಗಳ ಸಂಚಾರವನ್ನು ಎಂದಿನಿಂದ ಯಾವ ಯಾವ ಮಾರ್ಗಗಳಿಗೆ ಸಂಚಾರಕ್ಕೆ ಬಿಡಲಾಗುವುದು;

ಇ) ಬೆಂಗಳೂರು - ಹೈದರಾಬಾದ್ ಮಾರ್ಗವಾಗಿ ಬೀದರ್‌ಗೆ ವೋಲ್ವೋ ಬಸ್ಸಿನ ಸಂಚಾರವನ್ನು ಪ್ರಾರಂಭಿಸಲಾಗುವುದೇ;

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎರಡು ವೋಲ್ವೋ ವಾಹನಗಳನ್ನು ಪ್ರಸ್ತುತ ಬೆಂಗಳೂರು ತಿರುಪತಿ ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ವರ್ಷ ಇನ್ನೂ 8 ವೋಲ್ವೋ ಬಸ್ಸುಗಳನ್ನುಖರೀದಿಸಿ ಸೇರ್ಪಡೆ ಮಾಡಲು ಹಾಗೂ 20 ಬಸ್ಸುಗಳನ್ನು ಬಾಡಿಗೆಯ ಮೇಲೆ ಪಡೆದು ಕಾರ್ಯಾಚರಣೆಗೊಳಿಸಲು ಯೋಜಿಸಿದೆ. ಇದಲ್ಲದೆ ಬೆಂಗಳೂರು - ಚೆನ್ನೈ, ಹೈದರಬಾದ್, ಮುಂಬಯಿ, ಮಂಗಳೂರು, ತಿರುವನಂತಪುರಂ, ಬಿಜಾಪುರ, ಗುಲ್ಬರ್ಗಾ ಹುಬ್ಬಳ್ಳಿ ಇತ್ಯಾದಿ ಸ್ಥಳಗಳಿಗೆ ವೋಲ್ವೋ ಸೇವೆಗಳನ್ನು ಮುಂಬರುವ ದಿನಗಳಲ್ಲಿ ಆಚರಿಸಲು ಯೋಜಿಸಲಾಗಿದೆ.

ಇ) ವೋಲ್ವೋ ಬಸ್ಸುಗಳು ಬಂದನಂತರ ಅಗತ್ಯವಾದ ನಿರ್ಧಾರವನ್ನು ಕೈಗೊಳ್ಳಲಾಗುವುದು.

ಈ) ಮೇಲಿನ (ಇ) ಪ್ರಶ್ನೆಯ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಬೊಮ್ಮನಹಳ್ಳಿ ನಗರಸಭೆ ವ್ಯಾಪ್ತಿಗೆ ಗ್ರಾಮಗಳನ್ನು ಸೇರಿಸಿಕೊಳ್ಳುವ ಪ್ರಸ್ತಾವನೆ

1075 (1216) - ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಲವು ನಗರಸಭೆಗಳ ವ್ಯಾಪ್ತಿಯನ್ನು ವಿಸ್ತರಿಸಲು ಉದ್ದೇಶಿಸಿರುವುದು ನಿಜವೆ.

ಆ) ಹಾಗಿದ್ದಲ್ಲಿ ವಿಸ್ತರಿಸಲು ಉದ್ದೇಶಿಸಿರುವ ನಗರ ಸಭೆಗಳ ವಿವರ ನೀಡುವುದು.

ಇ) ಬೊಮ್ಮನಹಳ್ಳಿ-ಆನೇಕಲ್ ನಗರ ಸಭೆಗಳನ್ನು ವಿಸ್ತರಿಸಲು ಹಾಗೂ ಅದರಲ್ಲಿ ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಗ್ರಾಮಗಳ ವಿವರ ನೀಡುವುದು.

ಈ) ಸದರಿ ಗ್ರಾಮಗಳನ್ನು ನಗರ ಸಭೆಗೆ ಸೇರಿಸಿಕೊಳ್ಳಲು ಸರ್ಕಾರದ ಉದ್ದೇಶ ವಿವರ ನೀಡುವುದು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) 1. ಪಟ್ಟಣಗೆರೆ

2. ಬೊಮ್ಮಹಳ್ಳಿ

ಇ) ಬೊಮ್ಮನಹಳ್ಳಿ ನಗರಸಭೆಗೆ ಈ ಕೆಳಕಂಡ ಗ್ರಾಮಗಳನ್ನು ಸೇರಿಸಲು ಉದ್ದೇಶಿಸಲಾಗಿದೆ. 1. ಕೋಣನಕುಂಟೆ 2. ಕೊತ್ತನೂರು. 3. ಚುಂಚಗಟ್ಟ 4. ಸಾರಕ್ಕಿ ಅಗ್ರಹಾರ ಆನೇಕಲ್ ಪುರಸಭೆಗೆ ಯಾವ ಗ್ರಾಮವನ್ನೂ ಹೊಸದಾಗಿ ಸೇರಿಸಲು ಉದ್ದೇಶಿಸಿಲ್ಲ.

ಈ) ಈ ಗ್ರಾಮಗಳು ನಗರಸಭೆಯ ವ್ಯಾಪ್ತಿಗೆ ಹೊಂದಿಕೊಂಡಂತೆ ಇರುವ ಕಾರಣ ಸದರಿ ಗ್ರಾಮಗಳ ನಾಗರೀಕರಿಗೆ ಹೆಚ್ಚಿನ ನಾಗರೀಕ ಸೌಲಭ್ಯವನ್ನು ಒದಗಿಸಲು ಸರ್ಕಾರವು ಉದ್ದೇಶಿಸಿದೆ.